the position. You should be satisfied with it. Even if you are not satisfied since you are on the Opposition, you pretend as if you are not satified.

SRI D.B. CHANDRE GOWDA:- That is not well within the law. ಸ್ವಾಮಿ ತಾವು ಇಷ್ಟು ಹೇಳಿ.ಬೇರೆ ಏನು ಹೇಳುವುದಕ್ಕೆ ಆಗದಿದ್ದರು ಸಭಾ ನಾಯಕರಾಗಿ ನೀವು ಮಾಡಿದಂತಹ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳುವಾಗ ತಪ್ಪು ಆಯಿತು ಎಂದು ತಿಳಿದು ಮಾಡಿದ್ದೀರಿ ತಾನೇ? ಅಷ್ಟಾದರು ಬೇಕಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಪ್ರಸ್ತಾಪ ಮಾಡಿದ್ದೆ. ಇವರದ್ದು ಆದ ಮೇಲೆ ನನಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ. ಮಂಡ್ಯಾ ಜಿಲ್ಲೆಯ ಬೆಳ್ಳೂರು ಕೊಲೆ ಪ್ರಕರಣದ ಬಗ್ಗೆ..

ಶ್ರೀ ಡಿ.ಬಿ.ಚಂದ್ರೇಗೌಡ:- ಯಡಿಯೂರಪ್ಪನವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ತಯಾರಾಗಿಲ್ಲ, ನನ್ನ ಛಾರ್ಜ್ ಇದೆ.

MR. SPEAKER:- Under rule 68, the discussion in directed towards the Hon.Minister for Urban Development. He has made an attempt to give an elaborate reply. Some clarifications were sought and he tried to clarify.

SRI D.B. CHANDRE GOWDA:- My main question is, while having passed orders, you withdrew. It means, you have committed a mistake. Therefore, I demanded his resignation.

ಅಧ್ಯಕ್ಷರು:- ಅದಕ್ಕೆ ನೀವು ಹೇಳಿ ಸ್ವಾಮಿ;

SRI T.N. NARASIMHA MURTHY:- All that I have made statement at every stage, there is nothing more to add to it.

ಶ್ರೀ ಬಿ.ಎಂ. ಇದಿನಬ್ಬ:- ಮಾನ್ಯ ಮಂತ್ರಿಗಳು ಬೇಕಾದಷ್ಟು ಉತ್ತರ ಹೇಳಿದ್ದಾರೆ.

SRI D.B. CHANDRE GOWDA:- If this is the case I resist to this and stage a walk out.

(At this stage, all the hon.Members present belonging to the Janata Dal staged a walk out and withdrew from the House.)

ಮಂಡ್ಯ ಜಿಲ್ಲೆ ಬೆಳ್ಳೂರಿನಲ್ಲಿ ಪದ್ಮರಾಜಯ್ಯ ಎನ್ನುವ ವ್ಯಾಪಾರಿಯನ್ನು ಕೊಲೆ ಮಾಡಿರುವ ಬಗ್ಗೆ.

+ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆ, ಬೆಳ್ಳೂರಿನಲ್ಲಿ 5-7-90ರಂದು ಬೆಳಿಗ್ಗೆ 11 ಗಂಟೆಗೆ ಪದ್ಮರಾಜಯ್ಯ ಎನ್ನವಂಥ ಒಬ್ಬ ವ್ಯಾಪಾರಸ್ಥನನ್ನು ಒಬ್ಬ ವ್ಯಕ್ತಿ ಬಂದು ತನ್ನ ಮನೆ ಹತ್ತಿರ ಕರೆದುಕೊಂಡು ಹೋಗಿದ್ದಾರೆ.. ಕರೆದುಕೊಂಡು ಹೋದಂಥ ವ್ಯಕ್ತಿ ಎಲ್ಲಿದ್ದಾನೆ ಎನ್ನುವುದು ಯಾರಿಗೂ ಪತ್ತೆ ಇಲ್ಲ. ಆದೇ ದಿನ ರಾತ್ರಿ 11 ಗಂಟೆಯಲ್ಲಿ ಆದೇ ವ್ಯಕ್ತಿ ಒಂದು ಚೀಲ ಹಿಡಿದುಕೊಂಡು ಬೆಳ್ಳೂರು ರಸ್ತೆಯಲ್ಲಿ ಹೋಗುತ್ತಿದ್ದಾಗ, ಗೂರ್ಖ ಒಬ್ಬ ಆತನನ್ನು ತಡೆದು, ಚೀಲದಲ್ಲಿ ಏನಿದೆ ಎಂದು ಪ್ರಶ್ನೆ ಮಾಡಿದಾಗ, ಅಲ್ಲಿದ್ದಂಥ ಜನ ಮುತ್ತಿಕೊಂಡಿದ್ದಾರೆ. ಅವನು ವಾಪಸ್ಸು ತನ್ನ ಮನೆ ಕಡೆ ಓಡಿದ್ದಾನೆ. ಗೂರ್ಖ ಬೆನ್ನತ್ತಿ ಹೋಗಿ ಚೀಲ ಕಿತ್ತುಕೊಂಡಾಗ, ಪದ್ಮರಾಜಯ್ಯ ಎನ್ನುವ ವ್ಯಾಪಾರಸ್ಥನನ್ನು ಬೆಳಿಗ್ಗೆ 11 ಗಂಟೆಗೆ ಕರೆದುಕೊಂಡು ಹೋಗಿದ್ದ. ಆತನ ರುಂಡ ಅಂದರೆ ತಲೆ ಮಾತ್ರ ಚೀಲದಲ್ಲಿ ಸಿಕ್ಕಿದೆ. ಕೈಕಾಲು ಬೇರೆ ಅವನ ಮನೆಯ ಪಕ್ಕದಲ್ಲಿಯೇ ಇವೆ. ರಾತ್ರಿ 11 ಗಂಟೆಗೆ ಈ ಘಟನೆ ನಡೆದು, 12 ಗಂಟೆಗೆ ಅಲ್ಲಿನ ಜನರು ಕಂಪ್ಲೇಂಟ್

ಕೊಟ್ಟಿದ್ದಾರೆ. ಇವತ್ತಿನವರೆಗೆ ಅಪರಾಧಿಯನ್ನು ಹಿಡಿದಿಲ್ಲ. ನಾಳೆ ದಿವಸ ಆ ಊರಿನಲ್ಲಿ ಬಂದ್ ಮತ್ತು ಶಾಂತಿ ಮೆರವಣಿಗೆ ಆಗುತ್ತಿದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಹಿಂದೆ, 1982ರಲ್ಲಿ ಕೊಲೆಯಾಯಿತು, 86ರಲ್ಲಿ ಕೊಲೆಯಾಯಿತು, ಇದುವರೆಗೂ ಪತ್ತೆಯಾಗಲಿಲ್ಲ. 1986ರಲ್ಲಿ ಈ ಜೈನ ಸಮಾಜಕ್ಕೆ ಸೇರಿದ, ದೊಡ್ಡ ದೊಡ್ಡ ಮನೆತನದ, ಒಳ್ಳೆಯ ಮನೆತನದ 7-8 ಜನ ಹೆಣ್ಣುಮಕ್ಕಳನ್ನು ತೆಗೆದುಕೊಂಡು ಹೋಗಿ, ವೇಶ್ಯಾವೃತ್ತಿಗೆ ಹಾಕಿದ್ದಾರೆ. ಆದರೆ 9ನೇ ಹೆಣ್ಣು ಮಗಳನ್ನು ಅಪಹರಣ ಮಾಡಿಕೊಂಡು ಹೋದಾಗ, ಆದಿಚುಂಚನ ಗಿರಿಯ ಸ್ವಾಮಿಗಳು ಅಲ್ಲಿಗೆ ಬಂದು ಇನ್ನು ಮೂರು ದಿವಸದೊಳಗಾಗಿ ಹೆಣ್ಣು ಮಗಳನ್ನು ತಂದು ಬಿಡದೇ ಇದ್ದರೆ, ಅಶಾಂತಿ ವಾತಾವರಣ ಉಂಟಾಗುತ್ತದೆಂದು ತಿಳಿಸಿದಾಗ 3 ದಿವಸದಲ್ಲಿ ಹೆಣ್ಣುಮಗಳನ್ನು ಊರಿಗೆ ತಂದು ಬಿಟ್ಟರು. ನಾನು ಮಾನ್ಯ ಸಭಾನಾಯಕರಲ್ಲಿ ತಮ್ಮ ಮೂಲಕ ಒತ್ತಾಯ ಮಾಡುವುದು ಏನೆಂದರೆ ಈ ರೀತಿಯ ಘಟನೆ ನಡೆದರೂ ಸಹ ಪತ್ರಿಕೆಗಳಲ್ಲಿ ಏನು ಬಂದಿಲ್ಲ. ಇದುವರೆಗೂ ತಪ್ಪಿತಸ್ಥರನ್ನು ಬಂಧನ ಮಾಡಿಲ್ಲ. ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ಆ ಕ್ಷೇತ್ರದ ಶಾಸಕರು ಇದ್ದಾರೆ, ಅವರು ಕೂಡ ಮಾತನಾಡಲಿದ್ದಾರೆ. ನಾನು ಇದರ ಬಗ್ಗೆ ಒತ್ತಾಯ ಮಾಡುವುದು ಇಷ್ಟೆ. ಯಾವ ಪೋಲೀಸ್ ಅಧಿಕಾರಿ ರುಂಡ ಸಿಕ್ಕಿದ ಮೇಲೂ ಮುಚ್ಚುವಂಥ ಪ್ರಯತ್ನ ಮಾಡಿದ್ದಾನೆ, ಇದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಿ. ಇದುವರೆಗೂ ಕ್ರಮ ತೆಗೆದುಕೊಳ್ಳದೇ ಇದ್ದರೆ, ಊರಿನಲ್ಲಿ ಅಶಾಂತಿ ವಾತಾವರಣ ಉಂಟಾಗದೇ ಮತ್ತೇನಾಗುತ್ತದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ತಮಗೆ ನಂಬಿಕೆ ಇರತಕ್ಕ ಯೋಗ್ಯ ಸಿ.ಓ.ಡಿ. ಅಧಿಕಾರಿಯಿಂದ ತನಿಖೆ ಮಾಡಿಸಿ, ಮತ್ತೊಮ್ಮೆ ಇಂಥ, ಘಟನೆಗಳು ನಡೆಯದಂತೆ ಅಶಾಂತಿಯ ವಾತಾವರಣ ಉಂಟಾಗಾದಂತೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸ್ವಾಮಿ, 5-7-90ನೇ ಗುರುವಾರ ಬೆಳ್ಳೂರಿನಲ್ಲಿ ಪದ್ಮರಾಜಯ್ಯ ಎನ್ನತಕ್ಕ ವ್ಯಕ್ತಿಯನ್ನು ಕೊಲೆ ಮಾಡಿದ್ದಾರೆ. ಕೊಲೆ ಮಾಡಿರತಕ್ಕವನು ಮುಸಲ್ಮಾನ್ ಜನಾಂಗಕ್ಕೆ ಸೇರಿದವನು, ಕೊಲೆಯಾಗಿರತಕ್ಕ ವ್ಯಕ್ತಿ ಜೈನ ಸಮಾಜಕ್ಕೆ ಸೇರಿದವನು. ಬೆಳ್ಳೂರಿನಲ್ಲಿ ತಮಗೆ ಚೆನ್ನಾಗಿ ಗೊತ್ತಿದೆ, ಅಲ್ಲಿ ಎರಡು ಕೋಮುಗಳು ಸಹ ಪ್ರಬಲವಾಗಿ ಬೆಳೆದುಕೊಂಡಿವೆ. 1982ನೇ ಇಸವಿಯಲ್ಲಿ ಇದೇ ರೀತಿ ಕೋಮು ಗಲಭೆಯಾಗಿ ಬಹಳಷ್ಟು ಅನಾಹುತವಾಗಿದೆ. ಮಾನ್ಯ ಯಡಿಯೂರಪ್ಪನವರು ಏನು ಪ್ರಸ್ತಾಪ ಮಾಡಿದ್ದಾರೆ, ಈ ಒಂದು ಕೊಲೆಯಾಗಿ 13 ದಿವಸವಾಯಿತು. ಕೊಲೆ ಮಾಡಿದವರು ಅಬ್‌ಸ್ಕಾಂಡ್ ಆಗಿದ್ದಾನೆ. ಅವನು ಇಲ್ಲವೇ ಇಲ್ಲ, ಬೇರೆ ಕಡೆ ಹೊರಟು ಹೋಗಿದ್ದಾನೆ. ಪೋಲೀಸರು ಏನು ಶೋಧನೆ ಮಾಡಿದರು ಇನ್ನೂ ಸುಳಿವು ಸಿಕ್ಕಿಲ್ಲ. ಈ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸಬೇಕು. ಏಕೆಂದರೆ 1988ರಲ್ಲಿ ಕೂಡ ನನ್ನ ತಾಲ್ಲೂಕಿನಲ್ಲಿ ಹೆಣ್ಣು ಮಕ್ಕಳ ತಲೆಯನ್ನು ಕತ್ತರಿಸಿಕೊಂಡು ಹೋದರೂ ಅದನ್ನೂ ಕೂಡ ಇದುವರೆಗೆ ಪತ್ತೆ ಹಚ್ಚುವುದಕ್ಕೆ ಆಗಲಿಲ್ಲ. ಈ ಹಿಂದೆ ಕೊಲೆಯಾಗಿರುವುದನ್ನು ನಾವು ಕೂಡ ನೋಡಿದ್ದೇವೆ, ಕೇಳಿದ್ದೇವೆ. ಆದರೆ, ಈ ಕೊಲೆ ಯಾವ ರೀತಿ ಆಗಿದೆ ಅಂದರೆ, ಅರ್ಧ ಆಡಿಗೆ ಒಂದೊಂದು ಪೀಸ್ ಹಾಕಿದ್ದಾನೆ. ರುಂಡದ ಒಂದು ಭಾಗವನ್ನು ಒಂದು ಕಡೆ ಹೂತಿದ್ದರೆ, ಮತ್ತೊಂದು ಭಾಗವನ್ನು ಇನ್ನೊಂದು ಕಡೆ ಹೂತಿದ್ದಾನೆ. ತಲೆಯನ್ನು ಬ್ಯಾಗ್‌ನಲ್ಲಿಟ್ಟುಕೊಂಡು ಹೋಗತಕ್ಕ ಸಂದರ್ಭದಲ್ಲಿ ರಾತ್ರಿ 1-30 ಗಂಟೆಯಲ್ಲಿ ಗೂರ್ಖನ ಕೈಗೆ ಸಿಕ್ಕಿಬಿದ್ದಿದ್ದಾನೆ. ಹೀಗಾಗಿ ಬೆಳ್ಳೂರಿನಲ್ಲಿ ಬಿಸಿ ವಾತಾವರಣ ಉದ್ಭವವಾಗಿದೆ. ನಾಳೆ ಅಲ್ಲಿನ ನಾಗರೀಕರು ಬಂದ್ ಮಾಡತಕ್ಕ ವಿಚಾರ ಇಟ್ಟುಕೊಂಡಿದ್ದಾರೆ. ಈಗಾಗಲೇ ನಾನು ತಮ್ಮ ಗಮನಕ್ಕೆ ನನ್ನ ತಾಲ್ಲೂಕಿನ ಲಾಳನಕೆರೆ ಘಟನೆಯನ್ನು ತಂದಿದ್ದೇನೆ. ಇದರ ಬಗ್ಗೆ ಈಗಾಗಲೇ ಸಿ.ಓ.ಡಿ.ಗೆ ಆದೇಶ ಕೊಟ್ಟಿದ್ದೀರಿ. ಅದು ಏನಾಗಿದೆ ಗೊತ್ತಿಲ್ಲ, 4-6 ಕೊಲೆಗಳು ಸರಣಿ ರೀತಿಯಲ್ಲಿ ನನ್ನ ತಾಲ್ಲೂಕಿನಲ್ಲಿ ನಡೆದಿದ್ದರು ಪೋಲೀಸಿನವರು ಪತ್ತೆ ಹಚ್ಚತಕ್ಕ ಪ್ರಯತ್ನ ಮಾಡಿಲ್ಲ. ಲಾಳನಕೆರೆ ಕೊಲೆ ಮತ್ತು ಬೆಳ್ಳೂರು ಕೊಲೆಗಳನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ವೀರೇಂದ್ರಪಾಟೀಲ್ (ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ಸವಿಸ್ತಾರವಾಗಿ ವರದಿ ಸಂಗ್ರಹಣೆ ಮಾಡುವುದಕ್ಕಾಗಿಲ್ಲ. ಏಕೆಂದರೆ ಇಲ್ಲಿಗೆ ಬಂದಮೇಲೆ ಮಾನ್ಯ ಶಾಸಕರಾದ ಶಿವರಾಮೇಗೌಡರು ಇದು ಬಹಳ ಕಳವಳಕ್ಕೆ ಈಡುಮಾಡಿದೆ ಎಂದು ಶಂಕೆಯನ್ನು ವ್ಯಕ್ತಮಾಡಿ, ಸಿ.ಓ.ಡಿ. ತನಿಖೆಗೆ ಡಿಮ್ಯಾಂಡ್ ಮಾಡಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಡಿಮ್ಯಾಂಡ್ ಮಾಡಿದ್ದಾರೆ. ತಕ್ಷಣ ಸಿ.ಓ.ಡಿ.ಗೆ ಮತ್ತು ಒಳ್ಳೆಯ ಅಧಿಕಾರಿ ಕಡೆಯಿಂದ ಇದನ್ನು ಪೂರ್ತಿಯಾಗಿ ಎನ್‌ಕ್ವೈರಿ ಮಾಡಿಸುತ್ತೇನೆ. ಮತ್ತು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಯಾರೇ ತಪ್ಪಿತಸ್ಥರು ಇರಲಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ಸಭೆಯನ್ನು ಮುಂದೂಡುವುದಕ್ಕೆ ಮೊದಲು ಮೂರನೇ ಅಧಿವೇಶನದಲ್ಲಿ ನಡೆಸಲಾದ ಮುಖ್ಯ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಹೇಳಲಿಚ್ಛಿಸುತ್ತೇನೆ. 1990ನೇ ಇಸವಿ ಜೂನ್ ನಾಲ್ಕರಂದು ಪ್ರಾರಂಭವಾದ ಸದನವು.....

ಬರಗಾಲ ಪರಿಸ್ಥಿತಿಯ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ, ಒಂದು ನಿಮಿಷ, ಈಗ ಅನೇಕ ಜಿಲ್ಲೆಗಳಲ್ಲಿ ಮಳೆಯಾಗಿಲ್ಲ. ಇವೊತ್ತು ನಾವು ಹೋದರೆ ಇನ್ನು ಎರಡು ತಿಂಗಳು ನಾವು ಯಾರೂ ಇರುವುದಿಲ್ಲ. ರೈತನ ಪರಿಸ್ಥಿತಿ ಸರಿಯಿಲ್ಲ. ಬರಗಾಲ ಪ್ರದೇಶಕ್ಕೆ ಏನು ಅನುಕೂಲಗಳು ಆಗಬೇಕು ಎನ್ನುವ ಬಗ್ಗೆ ಇಲ್ಲಿ ಚರ್ಚೆಯಾಗಲಿಕ್ಕೆ ಸಮಯ ಇರಲಿಲ್ಲ. ಆದಕ್ಕೆ ಸರ್ಕಾರದ ಕಡೆಯಿಂದ ಅದರ ಬಗ್ಗೆ ಏನಾಗಿದೆ ಎಲ್ಲಿ ಮಳೆಯಾಗಿದೆ, ಎಲ್ಲಿ ಮಳೆ ಆಗಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಏನಾದರೂ ಒಂದು ಹೇಳಿಕೆ ಕೊಡಬಹುದು ಏನೋ ಎಂದು ಸಭಾನಾಯಕರು ಇದ್ದಾಗ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ:- ಇದರ ಬಗ್ಗೆ ಕಾನೂನು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯ ಬಗ್ಗೆ ಮೊನ್ನೆ ಜಿಲ್ಲಾಪರಿಷತ್‌ನಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ಇಡೀ ಜಿಲ್ಲೆ ಬರಗಾಲ ಪೀಡಿತವಾಗಿದೆ. 5 ಕೋಟಿ ರೂಪಾಯಿಯನ್ನು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಬೇಕೆಂದು ಹೇಳಿ, ಮೈಸೂರು ಜಿಲ್ಲೆಯ ಜಿಲ್ಲಾಪರಿಷತ್‌ನಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಬಹಳ ಪ್ರಮುಖವಾದಂಥ ಬರಗಾಲ ಪ್ರಾಪ್ತಿಯಾಗಿದೆ. ಆ ಜಿಲ್ಲೆ ಒಂದೇ ಅಲ್ಲ. ಬಹುಶಃ ಹಳೇ ಮೈಸೂರಿನ ಪ್ರದೇಶಗಳಲ್ಲಿ ಕೂಡ ಶುರುವಾಗಿದೆ. ನಾನಾದರೂ ಚಾಮರಾಜನಗರದ ಪರಿಸ್ಥಿತಿ ಮತ್ತೆ, ಮತ್ತೆ ಹೇಳುತ್ತಿದ್ದೇನೆಂದು ತಾವು ಭಾವಿಸಬಾರದು. ನಮ್ಮ ಚಾಮರಾಜನಗರದ ಸುವರ್ಣಾವತಿ ನದಿಯಲ್ಲಿ ನೀರು ಈಗಾಗಲೇ ಕಂಪ್ಲೀಟ್ ಆಗಿ ಒಣಗುತ್ತಾ ಬಂದಿದೆ. ಬಹುಶಃ ಇನ್ನು 15 ದಿವಸ ಕುಡಿಯತಕ್ಕ ನೀರು ಇರಬಹುದು. ಆದ್ದರಿಂದ, ಅಲ್ಲಿನ ಪರಿಸ್ಥಿತಿ ಬಹಳ ಭೀಕರವಾಗಿದೆ, ಕುಡಿಯುವ ನೀರಿಗೆ ಮತ್ತು ದನಕರುಗಳಿಗೆ ತೊಂದರೆಯಾಗುತ್ತಿದೆ. ಇಡೀ ನಮ್ಮ ಚಾಮರಾಜನಗರ ಒಂದು ರೀತಿಯ ಬರಗಾಲ ಪ್ರದೇಶವಾಗಿದೆ. ಆದಕ್ಕೋಸ್ಕರ ಆ ಒಂದು ಪ್ರದೇಶವನ್ನು ಬರಗಾಲ ಪ್ರದೇಶ ಎಂದು ತಾವು ಒಂದು ಘೋಷಣೆ ಮಾಡಬೇಕು.

MR. SPEAKER:- Will the Hon.Minister (Sri T.N.Narasimha Murthy) make note of all these things?

ಶ್ರೀ ವಾಟಾಳ್‌ನಾಗರಾಜ್:- ಅಧ್ಯಕ್ಷರೆ, ಈ ಪರಿಸ್ಥಿತಿ ಉದ್ಭವವಾಗಿದೆ. ಆದಕ್ಕೋಸ್ಕರ ಬಹಳ ಜಾಗ್ರತೆ ಈ ಗಡಿ ಪ್ರದೇಶ ಏನು ತೊಂದರೆಗೆ ಸಿಕ್ಕಿದೆ, ಅದರ ಬಗ್ಗೆ ದಯವಾಡಿ ಮಾನ್ಯ